ಕರ್ನಾಟಕ ಸರ್ಕಾರ

**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ: ಕಾಶಿಇ/ಶೈವಿ/116/ಗ್ರಂ.ಪು.ನಿ/2020-21

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು-560001.
ದಿನಾಂಕ:10.11.2020.

## ಸುತ್ತೋಲೆ

ವಿಷಯ: ಇಲಾಖಾ ವ್ಯಾಪ್ತಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿನ ಗ್ರಂಥಾಲಯದ ಪುಸ್ತಕಗಳನ್ನು ಹಾಗೂ ದಿನ ಪತ್ರಿಕೆ ಮತ್ತು ನಿಯತಕಾಲಿಕೆಗಳನ್ನು ವಿಲೇವಾರಿ ಮಾಡುವ ಬಗ್ಗೆ.

ಉಲ್ಲೇಖ: 1) ಸರ್ಕಾರ ಆದೇಶ ಸಂಖ್ಯೆ: ಆಇ/03/ಟಿ.ಎಫ್.ಪಿ./2018, ದಿನಾಂಕ: 14-05-2018.
2) ಈ ಕಛೇರಿಯ ಸುತ್ತೋಲೆ ಸಂಖ್ಯೆ:ಕಾಶಿಇ/212/ಆಂತರಿಕ(ಸಾಸು)/2000 ದಿನಾಂಕ:30-11-2000
3) ಈ ಕಛೇರಿಯ ಸುತ್ತೋಲೆ ಸಂಖ್ಯೆ:ಕಾಶಿಇ/173/ಗ್ರಂ.ದೈ.ಬೇ/2010/ಸಿವಿ-2 ದಿನಾಂಕ:16-11-2010

** ** **

ಇಲಾಖಾ ವ್ಯಾಪ್ತಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿನ ಗ್ರಂಥಾಲಯದಲ್ಲಿನ ಅನುಪಯುಕ್ತ ಪುಸ್ತಕಗಳನ್ನು ಹಾಗೂ 15 ವರ್ಷಗಳ ಹಿಂದಿನ ಹಳೆಯ ಗ್ರಂಥಗಳನ್ನು ಗ್ರಂಥಾಲಯದ ಕಡತದಿಂದ ತೆಗೆಯುವ ಕುರಿತು ಉಲ್ಲೇಖ (2) ಮತ್ತು (3) ಸುತ್ತೋಲೆ ಅನ್ವಯ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ.

ಪ್ರಸ್ತುತ ಎಲ್ಲಾ ವಿಶ್ವ ವಿದ್ಯಾಲಯಗಳು ಸಿ.ಬಿ.ಸಿ.ಎಸ್ (CBCS) ಪಠ್ಯಕ್ರಮವನ್ನು ಅಳವಡಿಸಿರುವುದರಿಂದ ಮತ್ತು ಕಾಲಕಾಲಕ್ಕೆ ಪಠ್ಯಕ್ರಮವು ಬದಲಾಗುತ್ತಿರುವುದರಿಂದ ಹೊಸ ಪಠ್ಯಕ್ಕಮಕ್ಕೆ ಅನುಗುಣವಾಗಿ ಉಪಯುಕ್ತವಾಗುವ ಪುಸ್ತಕಗಳನ್ನು ಹೊಂದಬೇಕಾಗಿರುತದೆ. ಈ ಹಿನ್ನೆಲೆಯಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿನ ಗ್ರಂಥಾಲಯದಲ್ಲಿನ ಅನುಪಯುಕ್ತ ಪುಸ್ತಕಗಳನ್ನು ವಿಲೇವಾರಿ ಮಾಡುವ ಸಂಬಂಧ ಈ ಕೆಡಳಕಂಡ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ತಿಳಿಸಲಾಗಿದೆ.

1. ಕಾಲೇಜು ಗ್ರಂಥಾಲಯದ ದೈನಂದಿನ ಪರಿಚಲನಾ ಕಾರ್ಯಗಳು ಸುಗಮವಾಗಿ ನಡೆಸುವ ದೃಷ್ಟಿಯಿಂದ ಅನುಪಯುಕ್ತ ಮತ್ತು 10 ವರ್ಷಗಳ ಹಿಂದಿನ ಹಳೆಯ ಗ್ರಂಥಗಳನ್ನು ಗ್ರಂಥಾಲಯದ ಸಂಗ್ರಹಣಾ ಕಡತದಿಂದ ತೆಗೆಯುವುದು. ಈ ಸಂಬಂಧ ವಾರ್ಷಿಕ ದಾಸ್ತಾನು ತಪಾಸಣಾ ತಂಡದ ವರದಿ ಆಧಾರದ ಮೇಲೆ ಪಟ್ಟಿಯನ್ನು ಸಿದ್ದಪಡಿಸಿಕೊಳ್ಳತಕ್ಕದ್ದು.

2. ಉಪಯೋಗಕ್ಕೆ ಬಾರದ, ಹರಿದುಹೋದ ಮತ್ತು ಅನುಪಯುಕ್ತ ಪುಸ್ತಕಗಳೇನಾದರೂ ಇದ್ದರೆ ವಾರ್ಷಿಕ ದಾಸ್ತಾನು ತಪಾಸಣಾ ತಂಡದ ವರದಿ ಆಧಾರದ ಮೇಲೆ ಪಟ್ಟಿಯನ್ನು ಸಿದ್ದಪಡಿಸಿಕೊಳ್ಳತಕ್ಕದ್ದು.

3. ವಾರ್ಷಿಕ ದಾಸ್ತನು ತಪಾಸಣಾ ತಂಡದ ಶಿಫಾರಸ್ಸಿನ ಮೇರೆಗೆ ಸಿದ್ದಪಡಿಸಿಕೊಂಡ ಪಟ್ಟಿಯನ್ನು **ಪ್ರಾಂಶುಪಾಲರ ನೇತೃತ್ವದಲ್ಲಿ ಎಲ್ಲ ವಿಭಾಗಗಳ ಮುಖ್ಯಸ್ಥರ ಸಮಿತಿ ರಚಿಸಿಕೊಂಡು**, ಪರಿಶೀಲಿಸಿ, 10 ವರ್ಷಗಳ ಹಿಂದಿನ ಹಳೆಯ ಗ್ರಂಥಗಳು ಹಾಗೂ ಉಪಯೋಗಕ್ಕೆ ಬಾರದ, ಹರಿದುಹೋದ ಮತ್ತು ಅನುಪಯುಕ್ತ ಪುಸ್ತಕಗಳನ್ನು ಉಲ್ಲೇಖ (1) ರ ಸರ್ಕಾರದ ಆದೇಶದಲ್ಲಿ ತಿಳಿಸಿರುವಂತೆ ಸೂಕ್ತ ಕ್ರಮ ಕೈಗೊಂಡು **ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ನಿಯಮಗಳ ಅನ್ವಯ ಹರಾಜು ಮಾಡಿ ಬಂದ ಹಣವನ್ನು ಸರ್ಕಾರಕ್ಕೆ ಜಮೆ ಮಾಡಿ ವಿವರಗಳನ್ನು ಮುಂದಿನ ಲೆಕ್ಕಪತ್ರ ತನಿಖಾ ಸಮಯದಲ್ಲಿ ಒದಗಿಸುವಂತೆ ತಿಳಿಸಲಾಗಿದೆ.**

4. ಕಾಲೇಜು ಗ್ರಂಥಾಲಯದ ವಾಚನಾಲಯಕ್ಕೆ ಖರೀದಿಸುವ ದಿನ ಪತ್ರಿಕೆ ಮತ್ತು ನಿಯತಕಾಲಿಕೆಗಳನ್ನು ಪ್ರತಿ ಆರ್ಥಿಕ ವರ್ಷದ ಮಾರ್ಚ್ ಅಂತ್ಯದೊಳಗೆ ಕಡ್ಡಾಯವಾಗಿ ಉಲ್ಲೇಖ (1) ರ ಸರ್ಕಾರದ ಆದೇಶದಲ್ಲಿ ತಿಳಿಸಿರುವಂತೆ ಸೂಕ್ತ ಕ್ರಮ ಕೈಗೊಂಡು **ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ನಿಯಮಗಳ ಅನ್ವಯ ಹರಾಜು ಮಾಡಿ ಬಂದ ಹಣವನ್ನು ಸರ್ಕಾರಕ್ಕೆ ಜಮೆ ಮಾಡಿ ವಿವರಗಳನ್ನು ಮುಂದಿನ ಲೆಕ್ಕಪತ್ರ ತನಿಖಾ ಸಮಯದಲ್ಲಿ ಒದಗಿಸುವಂತೆ ತಿಳಿಸಲಾಗಿದೆ.**

Scanned with CamScanner

5. ಕಾಲೇಜು ಗ್ರಂಥಾಲಯದಲ್ಲಿ ವಿದ್ಯಾರ್ಥಿಗಳಿಗೆ ವಿತರಿಸುವ ಪುಸ್ತಕಗಳನ್ನು ಪರೀಕ್ಷೆ ಮುಗಿಯುವವರೆಗೂ ಹಿಂಪಡೆಯದೆ ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸುವಂತೆ ಹಾಗೂ ಪರೀಕ್ಷೆಗಳು ಮುಗಿದ ನಂತರ ವಿದ್ಯಾರ್ಥಿಗಳಿಂದ ಕಡ್ಡಾಯವಾಗಿ ಗ್ರಂಥಾಲಯ ಪುಸ್ತಕಗಳನ್ನು ವಾಪಾಸ್ಸು ಪಡೆಯಲು ಅಗತ್ಯ ಕ್ರಮ ವಹಿಸುವಂತೆ ತಿಳಿಸಲಾಗಿದೆ.

ಕಾಲೇಜು ಶಿಕ್ಷಣ ನಿರ್ದೇಶಕರು.

ಇವರಿಗೆ:

1) ಇಲಾಖಾ ವ್ಯಾಪ್ತಿಯ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ- ಅಗತ್ಯ ಕ್ರಮಕ್ಕಾಗಿ.
2) ಜಂಟಿ ನಿರ್ದೇಶಕರು ಪ್ರಾದೇಶಿಕ ಕಛೇರಿ ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಮಂಗಳೂರು, ಶಿವಮೊಗ್ಗ, ಧಾರವಾಡ ಮತ್ತು ಕಲಬುರಗಿ- ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ.
3) ಲೆಕ್ಕಾಧಿಕಾರಿಗಳು (ಲೆಕ್ಕಪರಿಶೋಧನೆ) ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ ಬೆಂಗಳುರು- ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ

ಪ್ರತಿಯನ್ನು:

1) ಮಾಹಿತಿ ಅಧಿಕಾರಿಗಳು ಮಾಹಿತಿ ತಂತ್ರಜ್ಞಾನ ವಿಭಾಗ ಕೆಂದ್ರ ಕಛೇರಿ ಬೆಂಗಳೂರು- ಇಲಾಖಾ ವೆಬ್ ಸೈಟ್ ನಲ್ಲಿ ಪ್ರಕಟಿಸಲು.
2) ಅಧ್ಯಕ್ಷರು ಕರ್ನಾಟಕ ರಾಜ್ಯ ಕಾಲೇಜು ಗ್ರಂಥಪಾಲಕರ ಸಂಘ (ರಿ) ಸರ್ಕಾರಿ ವಿಜ್ಞಾನ ಕಾಲೇಜು ನೃಪತುಂಗ ರಸ್ತೆ ಬೆಂಗಳೂರು- ಮಾಹಿತಿಗಾಗಿ
3) ಕಛೇರಿ ಪ್ರತಿ

Scanned with CamScanner